ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 6, MAY-JUNE 2022, Pp. 80-85.
©*IIMRD*, Mysuru
IIMRD JOURNALS
www.iimrd.com

# ಜನಪದ ಚಿತ್ರಕಲೆ: ರಂಗೋಲಿ

**ಡಾ. ವಿಜಯಲಕ್ಷ್ಮಿ***

*ಸಹ ಪ್ರಾಧ್ಯಾಪಕರು, ಜಾನಪದ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಸಾರಾಂಶ: (Abstract)**

*ಪ್ರಾಗೈತಿಹಾಸಕ್ಕೆ ಸಂಬಂಧಿಸಿದ ಗುಹಾಲಂಕಾರಗಳಲ್ಲಿ ಕಂಡು ಬಂದಿರುವ "ರಂಗೋಲಿ"ಯಂತಹ ಚಿಹ್ನೆಗಳು ಮಾಂತ್ರಿಕ ಕ್ರಿಯೆಗೆ ಸಂಬಂಧಪಟ್ಟವಾಗಿದ್ದು ದುಷ್ಟಶಕ್ತಿಗಳ ನಿವಾರಣೆಗಾಗಿ, ಸತ್ಫಲ ಸಾಧನೆಯ ಪ್ರಯತ್ನಕ್ಕೆ ಮುನ್ನುಡಿಯ ಸಂಕೇತಗಳೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಈಜಿಪ್ಟ್‌ನ ಪಿರಮಿಡ್ಡುಗಳಲ್ಲಿ, ಕ್ರಿ.ಪೂ.2–3ನೇ ಶತಮಾನಕ್ಕೆ ಸೇರಿದ ಸಿಂಧೂ ನಾಗರಿಕತೆಯಲ್ಲಿ ತ್ರಿಕೋನ, ಸ್ವಸ್ತಿಕ, ಪದ್ಮ ಮೊದಲಾದ ಚಿತ್ರಗಳು ಕಂಡು ಬರುತ್ತವೆ. ಈ ಚಿಹ್ನೆಗಳು ಇಂದಿಗೂ ರಂಗೋಲಿಯೊಳಗೆ ಹಾಸು ಹೊಕ್ಕಾಗಿರುವುದನ್ನು ಮನಗಾಣಬಹುದು.*

**ಮುಖ್ಯಪದಗಳು (Keywords):** ಜಾನಪದ, ಜಾತ್ರೆ, ನಾಗರಿಕತೆ, ರಂಗೋಲಿ, ಹಬ್ಬ.

**ಪೀಠಿಕೆ**

ರಂಗೋಲಿಯು ಭಾರತೀಯ ಜಾನಪದ ಕಲೆಯಾಗಿದ್ದು, ರಂಗೋಲಿಯ ಇತಿಹಾಸ ಮಾನವನ ಇತಿಹಾಸದಷ್ಟೇ ಪುರಾತನವಾದುದಾಗಿದೆ.

***ತಿಂಗಾಳು ಮುಳುಗಿದವೋ.. ರಂಗೋಲಿ ಬೆಳಗಿದವೋ...***
***ತಾಯಿ ಚಾಮುಂಡಿಯ ಪೂಜೆಗೆಂದು***
***ಬಾಳೆ ಬಾಗಿದವೋ...***

ನಮ್ಮ ನೆಲದ ಜನಪದ ಹೆಣ್ಣು ಮಕ್ಕಳು ತಮ್ಮ ಹೃದಯದ ಭಾವನೆಗಳಿಗೆ ಧ್ವನಿ ನೀಡಿ ಹಾಡಿಕೊಳ್ಳುವ ಈ ತ್ರಿಪದಿ ರಂಗೋಲಿ ರಚಿಸುವುದರ ಹಿಂದಿನ ಒಲವನ್ನು ತೋರುತ್ತದೆ. ಮನೆಯಂಗಳ, ದೇವರ ಮಂಟಪ, ದೇವಾಲಯದ ಪ್ರಾಂಗಣ, ಮಂಗಳ ಕಾರ್ಯ, ಪೂಜಾವ್ರತ, ಉಪನಯನ, ಒಸಗೆ, ಹಬ್ಬ–ಹರಿದಿನ, ರಥೋತ್ಸವ, ಸಭೆ–ಸಮಾರಂಭ... ಹೀಗೆ ಶುಭ ಸಂದರ್ಭಗಳಲ್ಲಿ ಅರಳುವ ರಂಗೋಲಿಗೆ ಭಾರತೀಯ ಸಂಸ್ಕೃತಿಯಲ್ಲಿ ಮಹತ್ವದ ಸ್ಥಾನವಿದೆ. ತನ್ನ ನಯನ ಮನೋಹರ, ಸುಕೋಮಲ, ಸೌಂದರ್ಯದಿಂದ ತಾನಿರುವ ಪರಿಸರವನ್ನು ಜೀವಂತಗೊಳಿಸುವ ರಂಗೋಲಿಯು ಮನೆ–ಮನವನ್ನು ಆವರಿಸಿಕೊಂಡು ಎಲ್ಲರ ಪ್ರೀತಿ, ಗೌರವಕ್ಕೆ ಪಾತ್ರವಾಗಿದೆ. ರಂಗೋಲಿಯು ಜನಪದ ಚಿತ್ರಕಲೆಯ ಒಂದು ಅವಿಭಾಜ್ಯ ಅಂಗ. ದುಷ್ಟಶಕ್ತಿಯ ನಿವಾರಣೆಗೆ ರಂಗೋಲಿಯೇ ಸಿದ್ಧೌಷಧ ಎನ್ನುವ ಅಂಶ ಜನಪದರಲ್ಲಿ ಮನೆ ಮಾಡಿತ್ತು.

*Please cite this article as: ವಿಜಯಲಕ್ಷ್ಮಿ* (2022). ಜನಪದ ಚಿತ್ರಕಲೆ: ರಂಗೋಲಿ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(6). ಪು.ಸಂ. 80–85.*

ಲಕ್ಷ್ಮಣ ಹಾಕಿದ ಗೆರೆದಾಟಿ ಸೀತೆ ಸಂಕಷ್ಟಕ್ಕೆ ಈಡಾದಳು. ಬಹುಶಃ ಇದೇ ರಂಗೋಲಿಯ ನೈಜ ಇತಿಹಾಸದ ಮೂಲ ಎನ್ನಬಹುದೇನೋ.

"ಹರಪ್ಪಾ ಮೊಹೆಂಜೋದಾರೋವಿನಲ್ಲಿ ವಿವಿಧ ನಮೂನೆಯ ಚುಕ್ಕಿ, ಸಾಲುಗಳು, ಗಿಡ, ಮರ, ತಾಯಿ, ಮಗು, ನವಿಲು ಇತರೆ ಹಕ್ಕಿಗಳನ್ನು ಚಿತ್ರಿಸಿರುವುದನ್ನು ಕಾಣಬಹುದು. ಇವುಗಳಲ್ಲಿ ದೃಢತೆಯಿಂದ ಕೂಡಿದ ಕಪ್ಪುಗೆರೆಗಳು ರಂಗೋಲಿಯ ಪ್ರಾಚೀನತೆಯನ್ನು ಸಾರುತ್ತವೆ. ಹಾಗೆಯೇ ಕವಿ ಬಾಣನು ಕ್ರಿ.ಶ. (606–648) ತನ್ನ ಕಾದಂಬರಿಯಲ್ಲಿ ಸೂತಿಕಾಗೃಹದ ಮುಂದೆ ರಂಗೋಲಿ ಹಾಕುವುದನ್ನು ವಿವರಿಸಿದ್ದಾನೆ. ಹಾಗೆಯೇ ಶಾಸನಗಳಲ್ಲಿ, ಹಸ್ತಪ್ರತಿಗಳಲ್ಲಿ, ತಾಳೆಗರಿಗಳಲ್ಲಿ ರಂಗೋಲಿಯ ಚಿತ್ರಗಳಿರುವಂತೆಯೇ ಸಂಸ್ಕೃತ ಕಾವ್ಯಗಳು, ಹಳಗನ್ನಡ ಕಾವ್ಯಗಳಲ್ಲಿ ರಂಗೋಲಿ ಕುರಿತ ಹೇಳಿಕೆಗಳು ಲಭ್ಯವಾಗುತ್ತವೆ. ಹೀಗೆ ಪ್ರಾಚೀನ ಕಾಲದಿಂದಲೂ ಮಾನವನ ಸುಲಭ ಮಾಧ್ಯಮವಾಗಿ ರಂಗೋಲಿ ಮೌಲ್ಯ ತುಂಬಿಕೊಂಡಿರುವ ಬಗೆ ಅನನ್ಯವಾದುದು.

ಜನಪದ ಸಾಹಿತ್ಯದಲ್ಲಿ ರಂಗೋಲಿಗೆ ಪ್ರಮುಖ ಸ್ಥಾನವಿದೆ. **"ಚಾಪೆ ಕೆಳಗೆ ಒಬ್ಬ ತೂರಿದರೆ ಇನ್ನೊಬ್ಬ ರಂಗೋಲಿ ಕೆಳಗೆ ತೂರಿದ"** ಎಂಬ ಗಾದೆಮಾತು ರಂಗೋಲಿಯ ಜಾಣ್ಮೆ, ಸೂಕ್ಷ್ಮತೆಯನ್ನು ಸಾದರಪಡಿಸುತ್ತದೆ. ಹಾಗೆಯೇ **ಮನೆಮುಂದೆ ಮೊಸರು ಚೆಲ್ಲಿದೆ** ಎನ್ನುವ ಗಾದೆ ರಂಗೋಲಿಯನ್ನು ಅನವರತ ಅರ್ಥೈಸುತ್ತದೆ. ಅಂತೆಯೇ 'ತಿಂಗಾಳು ಮುಳುಗಿದವೋ.. ರಂಗೋಲಿ ಬೆಳಗಿದವೋ...' ಎಂಬ ಜನಪದ ಗೀತೆಯಲ್ಲಿ ರಂಗೋಲಿಯನ್ನು ಅರ್ಥಪೂರ್ಣವಾಗಿ ಅಲಂಕಾರಿಕವಾಗಿ ಅರುಹಲಾಗಿದೆ. ತಿಂಗಳು ಎಂದರೆ **ಚಂದ್ರ,** ಚಂದ್ರ ಮುಳುಗಿದ ನಂತರ ಉಳಿಯುವುದು ಕತ್ತಲು, ಈ ಕತ್ತಲು ಕಳೆದು ಬೆಳಕು ಮೂಡುವುದೇ ಮನೆಯ ಮುಂದಿನ ರಂಗೋಲಿಯ ರಂಗಿನಿಂದ. ಇದೇ ಅರ್ಥದಲ್ಲಿ ಜನಪದರು ರಂಗೋಲಿಯನ್ನು ಗ್ರಹಿಸಿದ್ದಾರೆ.

***ಹಾದಿ ಗುಡಿಸೀರಮ್ಮ ಬೀದಿಯಾ ಗುಡುಸೀರೆ***
***ಬಾಗಿಲಿಗೆ ರಂಗೋಲಿ ಬಿಡಿರಮ್ಮ ।ಭೈರುವ।***
***ಈ ಊರ ಬೀದಿಗೆ ಬರುತಾನೆ ॥***

ದೇವರನ್ನು ಬರಮಾಡಿಕೊಳ್ಳಲು ರಂಗೋಲಿಯ ಔಚಿತ್ಯವನ್ನು ಈ ಮೇಲಿನ ತ್ರಿಪದಿ ವಿಸ್ತರಿಸಿ ಹೇಳಿದೆ. ರಂಗೋಲಿಯು ಭಾರತಕ್ಕೆ ವಿಶಿಷ್ಟವಾಗಿ ಒಲಿದು ಬಂದ ಚಿತ್ರಕಲೆ, ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಜನಪದ ಹೆಣ್ಣುಮಗಳ ಕಾಯಕ ಮುಂಜಾವಿನಿಂದಲೆ ಆರಂಭವಾಗುತ್ತದೆ. ಅವಳು ಮನೆಯಲ್ಲಿ ಎಲ್ಲರಿಗಿಂತ ಮೊದಲು ಎದ್ದು ಮಡಿಯಾಗಿ ಮನೆಯ ಮುಂದೆ ಸಗಣಿಯ ನೀರುಹಾಕಿ ರಂಗೋಲಿ ಬಿಟ್ಟು ನಂತರದಲ್ಲಿ ತನ್ನ ಪಾಲಿನ ಇತರ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಾಳೆ. ಮುಂಜಾನೆ ಸೂರ್ಯೋದಯಕ್ಕೆ ಮುನ್ನ ರಂಗೋಲಿ ಹಾಕುವುದು ಸೂರ್ಯನನ್ನು ಸ್ವಾಗತಿಸುವುದಕ್ಕಾಗಿ. ಮನೆಯಂಗಳವನ್ನು ಗುಡಿಸಿ, ನೀರುಹಾಕಿ ಹೊಸ್ತಿಲನ್ನು ಪೂಜಿಸಿ ಬಿಡಿಸುವ ಚಿತ್ತಾರದ ರಂಗೋಲಿಯ ಹಿಂದೆ ನಿರ್ಮಲತೆ, ಸಾತ್ವಿಕತೆ ಎದ್ದು ಕಾಣುತ್ತದೆ. ರಂಗೋಲಿಗೆ ಬಳಸುವ ಬಿಳಿಯ ಪುಡಿಯು ಶಾಂತಿಯ ಸಂಕೇತವಾಗಿದೆ.

ಜನಪದ ಸಂಸ್ಕೃತಿಯ ಪ್ರತೀಕವಾದ ರಂಗೋಲಿಯು ಜನಪದರ ಜೀವನ, ರೀತಿ–ನೀತಿ, ನಂಬಿಕೆ, ನಡವಳಿಕೆ, ಆಚಾರ–ವಿಚಾರ, ಸಂಪ್ರದಾಯಗಳನ್ನು ಪ್ರತಿನಿಧಿಸುತ್ತದೆ. ಮನೆಯಂಗಳದಲ್ಲಿ ಶುಭ್ರವಾದ

ಬಿಳಿಪುಡಿಯಿಂದ ರೂಪಿಸಿದ ಚಿತ್ತಾರಗಳು ಮನೆಯ ಹೊಸ್ತಿಲಮೇಲೆ, ಅಟ್ಟದ ಕೆಳಗೆ, ತೊಲೆ, ಬಾಗಿಲು, ದೇವರಕೋಣೆಯಲ್ಲಿ ಮೂಡುವ ಕಲಾಪೂರ್ಣ ಚಿತ್ತಾರಗಳು ಜನಸಂಸ್ಕೃತಿಯ ಬದುಕಿನ ಕಲಾಪ್ರಕಾರವಾಗಿದೆ. ರಂಗೋಲಿಯು ಒಂದು ಜೀವಂತ ಜನಪದ ಕಲೆ. ಒಂದು ಸುಂದರ ರಂಗೋಲಿಯ ವಿನ್ಯಾಸ ಮನಸ್ಸನ್ನು ಮುದಗೊಳಿಸುತ್ತದೆ. ಇದು ಸಾಮಾನ್ಯ ಬದುಕಿನ ಅಸಾಮಾನ್ಯ ಅಭಿವ್ಯಕ್ತಿಯ ದ್ಯೋತಕ. ಹಬ್ಬ–ಹರಿದಿನ, ಜಾತ್ರೆ, ರಥೋತ್ಸವ, ಗೌರಿ–ಗಣೇಶ, ದೀಪಾವಳಿ, ಸಂಕ್ರಾಂತಿ, ಯುಗಾದಿಗಳಂತಹ ಶುಭಸಮಾರಂಭಗಳು ಬಂದರಂತೂ ರಂಗೋಲಿಗೆ ಸುಗ್ಗಿಯೋಸುಗ್ಗಿ. ಇದಕ್ಕೆ ಧಾರ್ಮಿಕತೆಯ ಲೇಪನವಿದ್ದು ಆಚರಣೆಗಳಿಗೆ ಸಂಬಂಧಿಸಿದ ರಂಗೋಲಿಗಳಲ್ಲಿ ನಿರ್ದಿಷ್ಟ ಉದ್ದೇಶ ಮತ್ತು ನಿಯಮಿತ ಅರ್ಥವಿರುತ್ತದೆ. ಇಂತಿಂಥವರೇ ರಂಗೋಲಿ ಹಾಕಬೇಕೆನ್ನುವ ನಿಯಮವಿರುವುದನ್ನು ಗಮನಿಸಬಹುದು. ವರಮಹಾಲಕ್ಷ್ಮಿ ಹಬ್ಬದಂದು ಚುಕ್ಕಿಯಿಂದ ಅತೀತಶಕ್ತಿಯನ್ನು ರಂಗೋಲಿ ಮೂಲಕ ಬರೆದು ಆರಾಧಿಸುತ್ತಾ ಫಲಾಪೇಕ್ಷೆಯನ್ನು ಪಡೆಯುವುದುಂಟು. ಇನ್ನು ಗೌರಿ–ಗಣೇಶ ಹಬ್ಬದಂದು ಗಣೇಶನ ಚಿತ್ರವನ್ನು ಬರೆದು ಗೌರಿ–ಗಣೇಶನನ್ನು ಕೂರಿಸುವುದುಂಟು. ಹಾಗೆಯೆ ರಥಸಪ್ತಮಿಯಂದು ರಥದ ರಂಗೋಲಿ ಬಿಡಿಸುವ ಜನಪದರ ಕಲ್ಪನಾಶಕ್ತಿ ಬೆರಗನ್ನುಂಟು ಮಾಡುತ್ತದೆ. ದಕ್ಷಿಣ ಕರ್ನಾಟಕದಲ್ಲಿ ಕಾಣಬರುವ ನಾಗಾರಾಧನೆಯಲ್ಲಿ 'ನಾಗಮಂಡಲ'ದ ಚಿತ್ರವನ್ನು ರಂಗೋಲಿಯಿಂದ ಬಿಡಿಸಿ ನಾಗನನ್ನು ಆರಾಧಿಸುವ ಸಂಪ್ರದಾಯವಿದೆ. ಸಂಕ್ರಾಂತಿಯ ಸಂದರ್ಭದಲ್ಲಿ ಮನೆಯಂಗಳವನ್ನು ಸಾರಿಸಿ ರಂಗೋಲಿ ಬಿಡಿಸಿ ದನಕರುಗಳನ್ನು ಶೃಂಗರಿಸಿ ಅವುಗಳ ದೇಹದ ಮೇಲೂ ಚಿತ್ತಾರ ಮೂಡಿಸಿ, ಸಂಭ್ರಮಿಸುತ್ತಾರೆ. ಕಣಕ್ಕೆ ಮೇಟಿ ನೆಡುವಾಗ, ಧಾನ್ಯರಾಶಿ ಪೂಜೆ ಮಾಡುವಾಗ, ರಂಗೋಲಿಯೇ ಭೂಷಣವಾಗಿರುತ್ತದೆ, ಸಮೃದ್ಧಿಯ ಸಂಕೇತವಾದ ಭೂತಾಯಿಯನ್ನು ಬಗೆಬಗೆಯಲ್ಲಿ ಸಂಭ್ರಮದಿಂದ ಪೂಜಿಸುವ ಸಂದರ್ಭಗಳಲ್ಲೆಲ್ಲಾ ರಂಗೋಲಿಯಿಂದ ಭೂಮಿಯನ್ನು ಅಲಂಕರಿಸುತ್ತಾರೆ.

ಗ್ರಾಮೀಣ ಪ್ರದೇಶದಲ್ಲಿ ಮನುಷ್ಯನ ಮೇಲೆ ದೇವರು ಬಂದು, ದೆವ್ವ ಹಿಡಿದಿರುವ ವ್ಯಕ್ತಿಯನ್ನು ಮಂಡಲ(ನಿರ್ದಿಷ್ಟ ರಂಗೋಲಿ) ಬರೆದು, ಅದರ ಮೇಲೆ ಕೂರಿಸಿ ದೆವ್ವ ಬಿಡಿಸುವುದುಂಟು. ಇಂತಹ ರಂಗೋಲಿಗಳು ದುಷ್ಟಶಕ್ತಿಗಳ ನಿವಾರಣೆಯ ಒಳ್ಳೆಯ ಪ್ರಯತ್ನಕ್ಕೆ ಸಂಬಂಧಿಸಿದ ಸಂಜ್ಞೆಗಳಿರಬಹುದೆಂದು ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ಆದ್ದರಿಂದ ರಂಗೋಲಿ ಕಲೆಯು ಒಂದು ಧಾರ್ಮಿಕಾಚರಣೆಯಾಗಿ ಬೆಳೆದು ಬಂದಿದೆ. ಪೂಜಾಸ್ಥಾನ, ಯಜ್ಞಶಾಲೆಗಳ ನೆಲೆ ಹಾಗೂ ಗೋಡೆಗಳೆರಡನ್ನೂ ರಂಗೋಲಿಯಿಂದ ಅಲಂಕರಿಸುವುದು ಬಹಳ ಹಿಂದಿನಿಂದಲೂ ನಡೆದುಬಂದ ಪದ್ಧತಿ, ರಂಗೋಲಿ ಕಲೆಗೂ ಧಾರ್ಮಿಕ ಆಚರಣೆಗಳಿಗೂ ಅವಿನಾಭಾವ ನಂಟು. ಅಲ್ಲದೆ ಸಾಮಾಜಿಕ ಉತ್ಸವಗಳಲ್ಲೂ ರಂಗೋಲಿಯ ಅಲಂಕರಣ ನಡೆಯುತ್ತದೆ. ಅಂದರೆ ಮದುವೆ, ಅನ್ನಸಂತರ್ಪಣೆ, ಉಪನಯನ ಮುಂತಾದ ಸಮಾರಂಭಗಳಲ್ಲೂ ರಂಗೋಲಿ ಪ್ರಮುಖ ಪಾತ್ರ ವಹಿಸುತ್ತದೆ. ಹಳ್ಳಿಗಾಡಿನಲ್ಲಿ ಜಾತ್ರೆ ಜರುಗುವ ಊರುಗಳಲ್ಲಿ ರಥೋತ್ಸವದ ಸಮಯದಲ್ಲಿ ತೇರು ಎಳೆಯುವ ಬೀದಿಗಳನ್ನು ಚೆನ್ನಾಗಿ ಗುಡಿಸಿ, ನೀರಿನಿಂದ ಸಾರಿಸಿ ಅದರ ಮೇಲೆ ಯಾವ ಅಳತೆ ಪಟ್ಟಿಗಳ ಸಹಾಯವೂ ಇಲ್ಲದೆ ದೊಡ್ಡ–ದೊಡ್ಡ ರಂಗೋಲಿಗಳನ್ನು ರಚಿಸುತ್ತಾರೆ.

ಭಾರತೀಯ ಸಂಸ್ಕೃತಿ ಪ್ರತೀಕವಾದ ರಂಗೋಲಿ ಕಲೆಗೆ ಒಂದೊಂದು ಪ್ರದೇಶದಲ್ಲಿ ಒಂದೊಂದು ಹೆಸರಿದೆ. ಕರ್ನಾಟಕದಲ್ಲಿ ರಂಗೋಲಿ, ರಂಗವಲ್ಲಿ, ಹಸೆ ಮುಂತಾದ ಹೆಸರುಗಳಿಂದ ಕರೆಯಲ್ಪಟ್ಟರೆ,

ಗುಜರಾತಿನಲ್ಲಿ 'ಸತಿಯಾ' ಉತ್ತರ ಪ್ರದೇಶದಲ್ಲಿ 'ಸಾಝು', ರಾಜಸ್ಥಾನದಲ್ಲಿ 'ಮಂಡನಾ' ಒರಿಸ್ಸಾದಲ್ಲಿ 'ಝುಂಟಿ' ಆಂಧ್ರಪ್ರದೇಶದಲ್ಲಿ 'ಮುಗ್ಗು' ತಮಿಳುನಾಡು ಹಾಗೂ ಕೇರಳಗಳಲ್ಲಿ 'ಕೋಲಂ'... ಹೀಗೆ ಬೇರೆ ಬೇರೆ ಹೆಸರುಗಳಿಂದ ರಂಗೋಲಿ ಕಲೆ ಚಾಲ್ತಿಯಲ್ಲಿದೆ. ಪ್ರದೇಶದಿಂದ ಪ್ರದೇಶಕ್ಕೆ ರಂಗೋಲಿ ಬರೆಯುವ ಶೈಲಿ ಹಾಗೂ ಬಳಸುವ ಬಣ್ಣದಲ್ಲಿ ವ್ಯತ್ಯಾಸವಿದ್ದರೂ ಅವುಗಳ ಮೂಲ ಆಶಯ ಒಂದೇ ಆಗಿದ್ದು ಭೌಗೋಳಿಕ ಪರಿಸರ, ಅಲ್ಲಿ ಸಿಗುವ ಪರಿಕರಗಳು ಸಂಪ್ರದಾಯ, ಆಚರಣೆಗಳಿಗೆ ಪೂರಕವಾಗಿ ರಂಗೋಲಿಯನ್ನು ಬಿಡಿಸುತ್ತಾರೆ. ಇಲ್ಲೆಲ್ಲಾ ಅಮಂಗಳ ನಿವಾರಕವಾಗಿ, ಶುಭದ ಸಂಕೇತವಾಗಿ ರಂಗೋಲಿ ಹೆಚ್ಚು ಬಳಕೆಯಲ್ಲಿದೆ.

ರಂಗೋಲಿಗಳನ್ನು ಪಂಚತತ್ವದ ಆಧಾರದಿಂದಲೂ ರಚಿಸಬಹುದು. ಹೀಗೆ ರಚಿಸುವಾಗ ನಾಲ್ಕೂ ಕಡೆ ನಾಲ್ಕು ಚುಕ್ಕಿಗಳನ್ನು ಇಟ್ಟು ದಾರದ ಸಹಾಯದಿಂದ ಅಳತೆಗೆ ತಕ್ಕಂತೆ ಬಿಡಿಸುತ್ತಾ ಹೋಗಬಹುದು. ಆಯಾಯ ಸಂದರ್ಭಕ್ಕೆ ತಕ್ಕಂತೆ ಚಿತ್ತಾರ ಬಿಡಿಸುತ್ತಾ ಹೋದರೆ ಆಕರ್ಷಕವೆನಿಸುತ್ತದೆ, ಸ್ವಸ್ತಿಕ್, ಓಂಕಾರ್, ಗಣೇಶ, ಗಂಡು ಬೇರುಂಡ, ಶಿವಲಿಂಗ, ಸೂರ್ಯ ಚಂದ್ರ, ಲಕ್ಷ್ಮೀ, ಪಕ್ಷಿ, ಆನೆ, ಹೂ, ಬಳ್ಳಿ, ಎಲ್ಲವೂ ಆಕರ್ಷಕವಾಗಿ ಮನಸ್ಸಿಗೆ ಮುದ ಕೊಡುತ್ತದೆ. ಇದು ಕೈ–ಬೆರಳುಗಳ ಚಾಕಚಕ್ಯತೆಗೆ ಅನುಗುಣವಾಗಿ ಸೌಂದರ್ಯವನ್ನು ಹೊರಗೆಡಹುತ್ತದೆ. ರಂಗೋಲಿ ರಚಿಸುವಾಗ ಬಣ್ಣಗಳ ಬಗ್ಗೆ ಎಚ್ಚರಿಕೆ ವಹಿಸಬೇಕಾದುದು ಬಹುಮುಖ್ಯ, ಬಣ್ಣಗಳಲ್ಲಿ ಅರಿಶಿನವು ಸಂಮೃದ್ಧಿಯ ಸಂಕೇತ, ಕುಂಕುಮವು ತ್ಯಾಗ–ಅಭಿಮಾನದ ಸಂಕೇತ. ಹಸಿರು ಸೃಷ್ಟಿ, ಪ್ರಕೃತಿಯನ್ನು ಬಿಂಬಿಸುತ್ತದೆ. ನೀಲಿ ಅನಂತ, ಆಕಾಶ, ಬ್ರಹ್ಮಾಂಡದ ಪರಿಕಲ್ಪನೆಯನ್ನು ಎತ್ತಿಹಿಡಿಯುತ್ತದೆ. ಇವುಗಳ ಆಧಾರದಿಂದಲೂ ರಂಗೋಲಿ ಹಲವು ರೂಪಗಳನ್ನು ಪಡೆಯುತ್ತದೆ.

ಸಾಮಾನ್ಯವಾಗಿ ರಂಗೋಲಿಯನ್ನು 2 ವಿಧಗಳಲ್ಲಿ ಬಿಡಿಸುವುದುಂಟು. ಚುಕ್ಕೆ ಇಟ್ಟು ಚಿತ್ರ ಬಿಡಿಸುವುದು ಚುಕ್ಕಿ ರಂಗೋಲಿ ಎನಿಸಿಕೊಂಡರೆ, ಎಳೆಎಳೆದು ಚಿತ್ರ ಬಿಡಿಸುವುದು ಎಳೆರಂಗೋಲಿ ಎನಿಸಿಕೊಳ್ಳುತ್ತದೆ. ಹಾಗೆಯೇ ರಂಗೋಲಿಯನ್ನು ತೋರುಬೆರಳು, ಹೆಬ್ಬೆರಳುಗಳ ನಡುವೆ 'ರಂಗೋಲಿ ಪುಡಿ' ಹಿಡಿದು ಚಾಕಚಕ್ಯತೆಯಿಂದ ಕೈ ಮೇಲೆತ್ತದೆ ಬಿಡಿಸುವುದು ಮತ್ತೊಂದು ವಿಧಾನವಾಗಿದೆ. ಒಂದೇ ಬಾರಿಗೆ ಎರಡು ಎಳೆ, ಮೂರು ಎಳೆ, ನಾಲ್ಕು ಎಳೆಗಳನ್ನು ಬಿಡಿಸುವ ಕಲೆಗಾರ್ತಿಯರು ಕಂಡು ಬರುತ್ತಾರೆ. ರಂಗೋಲಿಯು ಚಿತ್ತಾರದಲ್ಲಿ ಅದನ್ನು ಬಿಡಿಸುವವರ ಕಲಾನೈಪುಣ್ಯತೆ, ಬೆರಗು ಸೃಜನಶೀಲತೆ, ಕಲ್ಪನಾಶಕ್ತಿ, ಕ್ರಿಯಾಶೀಲತೆ, ಹಾಗೂ ಅದಕ್ಕೆ ಒಳಗಾಗುವವರ ಮನಃಸ್ಥಿತಿ, ಭಾವನೆಗಳ ಅಭಿವ್ಯಕ್ತಿಯಾಗಿ ಕಂಡು ಬರುತ್ತದೆ.

'ರಂಗೋಲಿ'ಯು ಸ್ತ್ರೀಯರಿಗೆ ಒಲಿದು ಬಂದ ಸಿದ್ಧಹಸ್ತ ಕಲೆಯಾದರೂ ಕೆಲವು ನಿರ್ದಿಷ್ಟ ಸಂದರ್ಭ, ಪೂಜಾಸಮಯ, ವಿಶಿಷ್ಟ ಸಂಪ್ರದಾಯಗಳಲ್ಲಿ ಪುರುಷರೇ ರಂಗೋಲಿ ಬಿಡಿಸಬೇಕೆಂಬ ನಿಯಮವಿದೆ. ನಿರ್ದಿಷ್ಟ ಪೂಜೆ, ವ್ಯಾಧಿನಿವಾರಣೆ, ಭೂತಬಿಡಿಸುವಾಗ, ಭೂತಾರಾಧನೆ, ನಾಗಾರಾಧನೆ ಮೊದಲಾದ ಸಂದರ್ಭಗಳಲ್ಲಿ ರಂಗೋಲಿಯನ್ನು ಬಿಡಿಸುವವರು ಗಂಡಸರೇ ಆಗಿರುತ್ತಾರೆ. ಅಂತೆಯೇ ಮಂಗಳ ಕಾರ್ಯಗಳಲ್ಲಿ ಮುತ್ತೈದೆಯೇ ರಂಗೋಲಿ ಬಿಡಿಸಬೇಕೆನ್ನುವ ನಿಯಮವಿದ್ದರೂ, ಹಸೆ ಬರೆಯುವವರು ಮಾತ್ರ ಪುರುಷರೇ ಆಗಿರುವುದು ವಿಶೇಷ.

ರಂಗೋಲಿಯನ್ನು ಕುರಿತು ಹತ್ತು ಹಲವು ನಂಬಿಕೆಗಳಿವೆ;

- ತಿಥಿಯ ದಿನ ಮನೆಯಲ್ಲಿ ರಂಗೋಲಿಯನ್ನು ಬಿಡಬಾರದು.
- ಇದ್ದಿಲಿನಿಂದ ರಂಗೋಲಿ ಬರೆಯಬಾರದು.
- ನೀರಿನಿಂದ ರಂಗೋಲಿ ಬಿಡಿಸಿದರೆ ಕಷ್ಟ ಬಂದೊದಗುತ್ತದೆ.
- ಸುಣ್ಣದಿಂದ ರಂಗೋಲಿ ಹಾಕಿದರೆ ಸಾಲ ಹೆಚ್ಚಾಗುತ್ತದೆ.
- ದೆವ್ವ ಬಿಡಿಸುವಾಗ ಇದ್ದಿಲಿನಿಂದ ರಂಗೋಲಿ ಬರೆಯಬೇಕು.
- ಭೂತ ಬಿಡಿಸುವಾಗ ಮಂಡಲದ ರಂಗೋಲಿ ಹಾಕಿರಲೇಬೇಕು. ಇಲ್ಲದಿದ್ದರೆ ಭೂತ ಬಿಡಿಸುವವರನ್ನು ಭೂತಗಳು ಸಾಯಿಸುತ್ತವೆ.
- ರಂಗೋಲಿ ಹಾಕುವುದರಿಂದ ದೇವತೆಗಳು ಮನೆಯಲ್ಲಿಯೇ ವಾಸಿಸುತ್ತಾರೆ.
- ರಂಗೋಲಿ ಬಿಡಿಸಿದರೆ ಮನೆಯಲ್ಲಿ ಶಾಂತಿ ಸೌಹಾರ್ದತೆಗಳು ನೆಲೆಸುತ್ತವೆ.
- ಮುಂಜಾನೆ ಮತ್ತು ಸಾಯಂಕಾಲ ರಂಗೋಲಿ ಹಾಕಿದರೆ ಅನಿಷ್ಟಗಳು ಮನೆಯೊಳಗೆ ಬರುವುದಿಲ್ಲ.
- ಮನೆಯ ಮುಂದೆ ರಂಗೋಲಿ ಇಲ್ಲದಿದ್ದರೆ ಆ ಮನೆಗೆ ಭಿಕ್ಷುಕರು ಬರುವುದಿಲ್ಲ, ಅಲ್ಲಿ ಅಶುಭ ಕಾರ್ಯ ನಡೆದಿದೆಯೆಂಬ ಸೂಚನೆ.

ಜನಪದರು ರಂಗೋಲಿ ರಚಿಸಲು ಸಾಮಾನ್ಯವಾಗಿ ಬಳಸುವುದೆಂದರೆ ಬಿಳಿಯ ಕಲ್ಲಿನಪುಡಿ, ದೇವರ ಮುಂದೆ ಅಕ್ಕಿಹಿಟ್ಟನ್ನೂ ಉಪಯೋಗಿಸುತ್ತಾರೆ. ಇದಕ್ಕೆ ಬಗೆಬಗೆಯ ಬಣ್ಣ ಸೇರಿಸಿ ದ್ರವರೂಪದಲ್ಲಿ ಬಳಸುವುದುಂಟು. ಅಕ್ಕಿಹಿಟ್ಟಿನ ಜೊತೆ ಮೈದಾಹಿಟ್ಟು ಬೆರೆಸಿ ರಂಗೋಲಿ ಹಾಕಿದರೆ ಅದು ಬಹಳ ದಿನ ಬಾಳಿಕೆ ಬರುತ್ತದೆ. ಬಿಳಿಯ ಸುಣ್ಣದ ಗೋಡೆಯ ಅಂಚು ಕೆಮ್ಮಣ್ಣಿನಿಂದ ಕೂಡಿದ್ದು, ಅಲಂಕಾರಕ್ಕಾಗಿ ಬಿಳಿಯ ಗೋಡೆಗೆ ನೀಲಿ ಬಣ್ಣದಿಂದ ರಂಗೋಲಿ ಬಿಡಿಸುವುದನ್ನು ಇಂದಿಗೂ ಹಳ್ಳಿಯ ಮನೆಗಳಲ್ಲಿ ಕಾಣಬಹುದು.

ಸಗಣಿಯಿಂದ ಸಾರಿಸಿದ ನೆಲಕ್ಕೆ ಬಿಳಿಕಲ್ಲಿನ ಪುಡಿಯಿಂದ ರಂಗೋಲಿ ಬಿಡಿಸಿದರೆ, ಗಾರೆ ನೆಲಕ್ಕೆ, ಸುಣ್ಣ ಅಥವಾ ಅಕ್ಕಿಹಿಟ್ಟನ್ನು ಬಳಸಿ ಬರೆಯುತ್ತಾರೆ. ಆಧುನಿಕರು, ಸೀಮೆಸುಣ್ಣ, ಬಿಳಿಯ ಪೇಯಿಂಟು, ಚಿತ್ತಾರ ಕೊರೆದ ಮರದ ಅಥವಾ ಕಬ್ಬಿಣದ ಜಾಲರಿಗಳು, ಬಗೆಬಗೆಯ ವಿನ್ಯಾಸದ ಸ್ಟಿಕ್ಕರುಗಳು ವಿಶೇಷ ಸಂದರ್ಭಗಳಲ್ಲಿ ಬಳಕೆಯಲ್ಲುಂಟು. ವರಮಹಾಲಕ್ಷ್ಮಿಯಂದು ಎರಡು ಆನೆಗಳ ಚಿತ್ರ, ನಾಗರಪಂಚಮಿಗೆ ಸರ್ಪದ ರಂಗೋಲಿ, ಗೋಕುಲಾಷ್ಟಮಿಗೆ ಕೃಷ್ಣನ ರಂಗೋಲಿ, ದೀಪಾವಳಿಯಲ್ಲಿ ದೀಪಗಳು, ಶಿವರಾತ್ರಿಯಲ್ಲಿ ಶಿವಲಿಂಗ. ಇಷ್ಟೇ ಅಲ್ಲದೆ ಈ ಬಣ್ಣದ ಮೋಹಕತೆಗೆ ಬೆರಗಾಗಿ ಇತ್ತೀಚೆಗೆ ಪ್ರಸಿದ್ಧ ವ್ಯಕ್ತಿಗಳೂ ರಂಗೋಲಿಯಿಂದ ಮೂಡುತ್ತಿದ್ದಾರೆ. ಬಣ್ಣಗಳೊಂದಿಗೆ ಉಪ್ಪು ಸೇರಿಸಿ ಈ ಕಲೆಯಲ್ಲಿಯೂ ಆವಿಷ್ಕಾರಗಳು ನಡೆಯುತ್ತಿವೆ. ಕೆಲವೆಡೆ ಪ್ಲಾಸ್ಟಿಕ್ ಕೊಳವೆಗಳಿಗೆ ತೂತು ಕೊರೆದು ಅದರೊಳಗೆ ಬಣ್ಣ ತುಂಬಿಸಿ ರಂಗೋಲಿ ಹಾಕುವ ಹೊಸ ಉಪಾಯಗಳೂ ಹೆಚ್ಚು ಜನಪ್ರಿಯವಾಗುತ್ತಿದೆ. ಅಲಂಕಾರದ ಉದ್ದೇಶದಿಂದ ವಿವಿಧ ಧಾನ್ಯಗಳನ್ನು ಬಳಸಿ ಧಾನ್ಯ ರಂಗೋಲಿ ಬಿಡಿಸಲಾಗುತ್ತದೆ. ರಾಜ್ಯಮಟ್ಟ, ರಾಷ್ಟ್ರಮಟ್ಟದಲ್ಲಿ ರಂಗೋಲಿ ಸ್ಪರ್ಧೆಗಳನ್ನು ಗಮನಿಸಿದಾಗ ರಂಗೋಲಿ ಕಲೆಯ ಬೃಹತ್ತು, ಮಹತ್ತು ಅರ್ಥವಾಗುತ್ತದೆ. ಇತ್ತೀಚೆಗೆ ಸ್ತ್ರೀ–

ಪುರುಷರಿಬ್ಬರು ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿರುವುದು ವಿಶೇಷ. ಅದೇನೆಯಿರಲಿ ಭಾರತೀಯ ಮಹಿಳೆಯರ ಹಸ್ತದ, ಬೆರಳಿನ ಓಡಾಟದೊಂದಿಗೆ ಸೃಷ್ಟಿಯಾಗುವ ರಂಗೋಲಿಯ ಸೌಂದರ್ಯವೇ ಅದ್ಭುತ.

**ಉಪಸಂಹಾರ**

ಒಟ್ಟಾರೆ ಕಾಲದ ಜೊತೆಗೆ ಹೋರಾಡುತ್ತಾ ಸ್ವಂತಿಕೆಯನ್ನು ಉಳಿಸಿಕೊಂಡು ಹೊಸ ಮೈಲುಗಲ್ಲನ್ನು ಸೃಷ್ಟಿಸಿ ಜನಮಾನಸದಲ್ಲಿ ನೀರಿನಷ್ಟೆ ಬೆರೆತು ಹೋಗಿರುವ ರಂಗೋಲಿಯು ಸಂಪ್ರದಾಯ, ನಂಬಿಕೆ, ಆಚರಣೆ, ಸೌಂದರ್ಯದ ಪ್ರತೀಕ, ಶುಭದ ಸಂಕೇತ, ಅಲಂಕಾರದ ಸಾಧನವಾಗಿ, ಬಹುಮುಖತೆಯನ್ನು ಹೊಂದಿದೆ. ವ್ಯಷ್ಟಿಯಲ್ಲಿ ಅರಳಿ ಸಮಷ್ಟಿಯನ್ನು ಸಾಧಿಸಿದೆ. ಅಗಾಧ ವಸ್ತು ವೈವಿಧ್ಯತೆಯನ್ನು ಒಳಗೊಂಡಿರುವ ರಂಗೋಲಿ ಕಲೆಯ ಬಗ್ಗೆ ಮತ್ತಷ್ಟು ಆಳವಾದ ಸಂಶೋಧನೆ ನಡೆಯ ಬೇಕಾಗಿದೆ.

**ಪರಾಮರ್ಶನ ಗ್ರಂಥಗಳು**


- *Rangoli: A Colorful and Creative Expression of Indian Folk Art | Richland Library*. (2020, July 15). Www.Richlandlibrary.Com. Retrieved May 25, 2022, from https://www.richlandlibrary.com/blog/2020-07-15/rangoli-creative-expression-indian-folk-art-through-use-colors
- *The art and ritual of rangoli*. (2021, November 4). The Indian Express. https://indianexpress.com/article/lifestyle/art-and-culture/the-art-and-ritual-of-rangoli-diwali-tradition-india-kolam-7607055/
- *What is a Rangoli: Floor Folk Art from India for Diwali* (2018, September 27). *What is a Rangoli: Floor Folk Art from India for Diwali*. Kid World Citizen. https://kidworldcitizen.org/rangoli-floor-folk-art-from-india/